

## ನಕ್ಕುಬಿಡಿ

**ಪತ್ನಿ:** ರಿ... ನೀವು ದಿನಾ ಎರಡೇ ಪೆಗ್ ಕುಡೀತಿದ್ರಿ. ಇವತ್ಯಾಕೆ ಮೂರ್ ಪೆಗ್ ಕುಡೀತಿದ್ದೀರಿ?
**ಪತಿ:** ಕೊರೊನಾ ಅಲೆಗಳು ಇನ್ನೂ ನಿಂತಿಲ್ಲ ಅಲ್ವಾ, ಅದಕ್ಕೆ ಇದು ಬೂಸ್ಟರ್ ಡೋಸ್ ಕಣೇ!

***




ಇಂತಹ ಕುಡುಕ ಗಂಡನನ್ನು ಸಂಬಾಳಿಸಲು ನಾವಿಬ್ಬರು ಇರೋದೇ ಒಳ್ಳೆದಾಯ್ತು ಅಕ್ಕ!

‘ಜನರು ಬಂದು ರೆಡಿ ಅಂದರೆ, ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಮೈಸೂರಿನಲ್ಲಿರುವ ಅರಮನೆಯನ್ನು ತಲೆಯ ಮೇಲೆ ಹೊತ್ತು ಬೆಂಗಳೂರಿನವರೆಗೆ ಹೋಗುತ್ತೇನೆ’ ಅಂತ ಗುಂಡ ಒಮ್ಮೆ ಒಂದು ಚಾಲೆಂಜ್ ಮಾಡಿದ. ಈ ವಿಷಯ ಎಲ್ಲ ಕಡೆ ಪ್ರಚಾರವಾಗಿ ಎಲ್ಲೆಲ್ಲೂ ಸುದ್ದಿಯಾಯಿತು. ಮಾರನೆಯ ದಿನ ಪೇಪರ್‌ನವರು, ಟಿ.ವಿ.ಯವರು, ಎಲ್ಲ ಗಣ್ಯ ವ್ಯಕ್ತಿಗಳು ಹಾಗೂ ಸಾವಿರಾರು ಜನರು ಅರಮನೆ ಮುಂದೆ ಜಮಾಯಿಸಿದರು. ಗುಂಡ ಬಂದವನೇ ‘ನೀವೆಲ್ಲ ರೆಡೀನಾ’ ಅಂತ ಒಮ್ಮೆ ಎಲ್ಲರನ್ನೂ ಕೇಳಿದ. ಅಲ್ಲಿದ್ದವರೆಲ್ಲ ರೆಡಿ ಅಂದರು. ‘ಒಕೆ ಹಾಗಾದರೆ ನೀವೆಲ್ಲ ಸೇರಿ ಈ ಅರಮನೆಯನ್ನು ನನ್ನ ತಲೆಯ ಮೇಲಿಡಿ’ ಎಂದ. ನೆರೆದಿದ್ದವರೆಲ್ಲ ಅರೆಕ್ಷಣ ಅವಕ್ಕಾದರು.

**ಹೆಂಡತಿ:** ರಿ... ಗಂಟೆ ಎಂಟಾಯ್ತು, ಏಳಿ.
**ಗಂಡ:** ನಿದ್ದೆಯಿಂದ ಒಂದೇ ಸಾರಿ ಏಳುವ ಹಾಗೆ ಏನಾದರೂ ಒಳ್ಳೆಯ ವಿಷಯ ಹೇಳು. ಇಲ್ಲಾಂದ್ರೆ ನಾನು ಎದ್ದೇಳಲ್ಲ.
**ಹೆಂಡತಿ:** ನಿನ್ನೆ ಮಧ್ಯರಾತ್ರಿವರೆಗೂ ವಾಟ್ಸ್‌ಆ್ಯಪ್‌ನಲ್ಲಿ ಚಾಟ್ ಮಾಡ್ತಾ ಇದ್ದರಲ್ಲ, ಅದು ನನ್ನದೇ ಹೊಸ ನಂಬರ್!

***

**ಗಂಡ:** ನಾನು ಏನ್ ಹೇಳಿದ್ರೂ, ಏನೇ ಮಾಡಿದ್ರೂ ಅದರಲ್ಲಿ ತಪ್ಪು ಹುಡುಕುತ್ತೀಯಾ. ಕಳೆದ 20 ವರ್ಷದಿಂದ ಇದೇ ಆಗೋಯ್ತು ನಿಂದು.
**ಹೆಂಡತಿ:** ಇಪ್ಪತ್ತಲ್ಲ, ಇಪ್ಪತ್ತೆರಡು ವರ್ಷದಿಂದ!

***

ಗಂಡ–ಹೆಂಡತಿ ಒಂದು ಸಿನೆಮಾ ನೋಡಿ ಮನೆಗೆ ಬಂದಾಗ ನಡೆದ ಪ್ರಸಂಗ.
**ಹೆಂಡತಿ:** ರೀ... ತುಂಬಾ ಒಳ್ಳೆಯ ಕಾಮಿಡಿ ಸಿನಿಮಾಗೆ ನನ್ನನ್ನು ಕರೆದುಕೊಂಡು ಹೋಗಿದ್ರಿ. ನಕ್ಕು ನಕ್ಕು ನನ್ನ ಅರ್ಧ ಜೀವಾನೇ ಹೋಯ್ತು!
**ಗಂಡ:** ಹೌದಾ, ಹಾಗಾದ್ರೆ ಇನ್ನೊಂದು ಸಲ ನೋಡೋಣ ನಡಿಯೇ!

***

**ಮೇಷ್ಟ್ರು:** ಅಮ್ಮ ಶ್ರೇಷ್ಠನಾ? ಅಪ್ಪ ಶ್ರೇಷ್ಠನಾ?
**ಗುಂಡ:** ಅಪ್ಪನೇ ಶ್ರೇಷ್ಠ ಸರ್.
**ಮೇಷ್ಟ್ರು:** ಅದು ಹೇಗೆ?
**ಗುಂಡ:** ಯಾರನ್ನಾದರೂ ಅಮ್ಮ ಅಂತ ಕರಿಯಬಹುದು. ಯಾರ್ ಯಾರನ್ನೋ ಅಪ್ಪ ಅಂತ ಕರೆಯುವುದಕ್ಕೆ ಆಗಲ್ಲ. ಅದಕ್ಕೆ ಸರ್.

***

**ಸುಬ್ಬಿ:** ಏನು ಶಾಸ್ತ್ರಿಗಳೇ, ನನ್ನ ಗಂಡ ದಿನಾ ಕುಡಿದು ಜಗಳ ಆಡುತ್ತಾನೆ. ಮದುವೆ ವೇಳೆ ನೀವು ಅವರ ಜಾತಕವನ್ನು ಸರಿಯಾಗಿ ನೋಡಿರಲಿಲ್ವಾ?
**ಶಾಸ್ತ್ರಿಗಳು:** ಜಾತಕ ನೋಡಿ ಅವನಿಗೆ ಕುಜ ದೋಷ ಇದೆ ಅಂತ ಹೇಳಿದ್ದೆನಲ್ಲ.
**ಸುಬ್ಬಿ:** ಕುಜ ದೋಷ ಅಂದ್ರೆ?
**ಶಾಸ್ತ್ರಿಗಳು:** ಕುಡಿದು ಜಗಳವಾಡುವ ದೋಷ ಅಂತ!

***

**ಪತ್ನಿ:** ಯಾಕ್ರಿ ಆ ನಾಯಿ ಗುರುಗುಟ್ಟಿ ನೋಡ್ತಿದೆ?
**ಪತಿ:** ಏನಿಲ್ಲ ಕಣೇ! ಅದಕ್ಕೆ ನೀನು ಮಾಡಿದ ಪಲಾವ್ ಹಾಕ್ದೆ. ಟೇಸ್ಟ್ ಮಾಡಿ ಗುರುಗುಟ್ಟಿ ನೋಡ್ತಾ ಇದೆ!

***

ಪೇಟೆಯಲ್ಲಿ ಪತ್ನಿ ಪತಿಯನ್ನು ಹೀಗೆ ಕೇಳಿದಳು.
**ಪತ್ನಿ:** ಯಾರು ಅವಳು?
**ಪತಿ:** ನನ್ನ ಕಾಲೇಜ್ ಫ್ರೆಂಡ್.
**ಪತ್ನಿ:** ಏನೋ ಮಾತಾಡ್ತಾ ಇದ್ರಿ. ಏನಂತೆ ವಿಚಾರ?
**ಪತಿ:** ನಾನು ನಿನ್ನ ಪತ್ನಿಯಾಗಿದ್ದರೆ ನಿನಗೆ ಚೀಲ ಹಿಡಿದುಕೊಳ್ಳಲು ಕೊಡುತ್ತಿರಲಿಲ್ಲ ಅಂತ ಅಂದ್ಲು.
**ಪತ್ನಿ:** ಏನೂ ಬೇಡ. ಕೊಡ್ರಿ ಇಲ್ಲಿ, ಆ ಚೀಲ ನಾನೇ ಹಿಡಿದುಕೊಳ್ಳುತ್ತೀನಿ.

***

**ಗಂಡ:** ಸುಭದ್ರಾ ದೇವಸ್ಥಾನದಲ್ಲಿ ಪ್ರವಚನ ಕೇಳೋಕೆ ಹೋಗಿದ್ದೀಯಲ್ಲ ಏನಾದ್ರೂ ಉಪಯೋಗ ಆಯ್ತಾ?
**ಸುಭದ್ರ:** ಆಗದೇ ಏನು? ಪಕ್ಕದ ಬೀದಿ ಶಾಂತಮ್ಮನ ಮಗಳು ವೀಣಾ ಆ ಶ್ರೀಕಂಠಯ್ಯನ ಮಗನ ಜೊತೆ ಓಡಿ ಹೋದಳಂತೆ!

ಸಂಗ್ರಹ: ಶರದ ಕುಲಕರ್ಣಿ, ಬೀದರ್

